## ಕರ್ನಾಟಕ ವಿಧಾನ ಪರಿಷತ್ತು

5

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 358

**ಸದಸ್ಯರ ಹೆಸರು** : ಶ್ರೀ ಪ್ರತಾಪ್ ಸಿಂಹ ನಾಯಕ್ .ಕೆ (ವಿಧಾನಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 10-03-2025

**ಉತ್ತರಿಸುವ ಸಚಿವರು** : ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಒತ್ತುವರಿಯನ್ನು ಕೆಲವು ಷರತ್ತುಗಳನ್ನು ವಿಧಿಸಿ, ಸಕ್ರಮಗೊಳಿಸಲು 1996ರಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ಆ ಕುರಿತು ರಾಜ್ಯ ಸರ್ಕಾರ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಪ್ರಕರಣಗಳು ಕೈಬಿಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ.ಎಹೆಚ್‌ಎಫ್ ಎಫ್ 5 ಎಫ್ ಜಿಎಲ್ 90 (vol-II) ದಿನಾಂಕ 09.11.1992ರಲ್ಲಿ 1978ರ **ಪೂರ್ವದ ಅರಣ್ಯ ಭೂಮಿ ಒತ್ತುವರಿ ಸಕ್ರಮಾತಿಗಾಗಿ ತಾಲ್ಲೂಕು ಮಟ್ಟದ ಸಮಿತಿ ರಚಿಸಿ ಆದೇಶಿಸಲಾಗಿದೆ (ಪ್ರತಿ** ಲಗತ್ತಿಸಿದೆ). ಇದರನ್ವಯ ದಿನಾಂಕ 27.4.1978ರ ಪೂರ್ವದ ಅತಿಕ್ರಮಣ ಪ್ರಕರಣಗಳನ್ನು ಸಕ್ರಮಗೊಳಿಸಲು ವೃತ್ತ ಮಟ್ಟದಿಂದ ಸ್ವೀಕೃತವಾದ ಎಲ್ಲಾ ಅರ್ಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅದರಂತೆ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>ಯಾವುದೇ ಪ್ರಕರಣಗಳನ್ನು ಕೈ ಬಿಟ್ಟಿರುವುದು ಕಂಡು ಬಂದಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಅರ್ಹ ಒತ್ತುವರಿದಾರರ ಎಷ್ಟು ಪ್ರಕರಣಗಳು ಕೈಬಿಟ್ಟು ಹೋಗಿವೆ ಎಂದು ಆ ನಂತರದಲ್ಲಿ ಗುರುತಿಸಲಾಗಿತ್ತು; | ಅನ್ವಯಿಸುವುದಿಲ್ಲ |
| ಇ) | ಕೈಬಿಟ್ಟು ಹೋಗಿವೆ ಎಂದು ಗುರುತಿಸಲಾದ ಎಲ್ಲಾ ಅರ್ಹ ಒತ್ತುವರಿದಾರರ ಪ್ರಕರಣಗಳನ್ನು ಕೇಂದ್ರ ಸರ್ಕಾರದ ಅನುಮತಿ ಕೋರಿ ನಂತರದಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆಯೇ; | |
| ಈ) | ಕೈಬಿಟ್ಟುಹೋಗಿದ್ದು, ನಂತರ ಸಲ್ಲಿಸಲಾದ ಈ ಎಲ್ಲಾ ಪ್ರಸ್ತಾವನೆಗಳಲ್ಲಿನ ಪ್ರಕರಣಗಳನ್ನು ಈಗಾಗಲೇ ಸಕ್ರಮಗೊಳಿಸಲಾಗಿದೆಯೆ; | |
| ಉ) | ಕೈಬಿಟ್ಟು ಹೋಗಿ ನಂತರ ಸಲ್ಲಿಸಲಾದ ಈ ಎಲ್ಲಾ ಪ್ರಸ್ತಾವನೆಗಳಲ್ಲಿನ ಪ್ರಕರಣಗಳನ್ನು ಈವರೆವಿಗೂ ಸಕ್ರಮಗೊಳಿಸದಿದ್ದಲ್ಲಿ, ಅದಕ್ಕೆ ಕಾರಣಗಳೇನು? | |

**ಸಂಖ್ಯೆ: FEE/34/FGL/2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.